ಕೇಂದ್ರದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ದೇಶದ ಸಾಲ, ಬಂಗಾರ, ದಿನಗೂಲಿ ವ್ಯವಸ್ಥೆ ಹಾಗೂ ಡಾಲರ್ ಹೆಚ್ಚಳದಿಂದ ದೇಶವನ್ನು ಮಾರಾಟಕ್ಕೆ ತಂದು ನಿಲ್ಲಿಸಿದ್ದಾರೆ.

● **ಸಂತೋಷ ಲಾಡ್** ಸಚಿವ

ಸುದ್ದಿ ಸಿಂಚನ

ಸಚಿವ ಜಾರಕಿಹೊಳಿಗೆ ಹಿನ್ನಡೆಯಾಗಿಲ್ಲ

ಹುಬ್ಬಳ್ಳಿ:ಹುಕ್ಕೇರಿ ವಿದ್ಯುತ್ ಸೊಸೈಟಿ ಚುನಾವಣೆಯಲ್ಲಿ ಸಚಿವ ಸತೀಶ ಜಾರಕಿಹೊಳಿ ಅವರಿಗೆ ಸೋಲಿನಿಂದ ಯಾವುದೇ ರೀತಿಯ ಹಿನ್ನಡೆಯಾಗಿಲ್ಲ. ಸೊಸೈಟಿ ಚುನಾವಣೆ ಜಾರಕಿಹೊಳಿ ಅವರ ಸೋಲು ಎಂದು ಬಿಂಬಿಸುವುದು ತಪ್ಪು ಎಂದು ಹೆಸ್ಕಾಂ ಅಧ್ಯಕ್ಷ ಸೈಯದ್ ಅಜೀಮಪೀರ್‌ಖಾದ್ರಿ ಹೇಳಿದರು. ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯುತ್ ಸೊಸೈಟಿ ಚುನಾವಣೆ ಪಕ್ಷಾತೀತ. ಅಲ್ಲಿ ಕಾಂಗ್ರೆಸ್, ಬಿಜೆಪಿ ಚಿಹ್ನೆ ಇರುವುದಿಲ್ಲ. ಈ ಚುನಾವಣೆ ಫಲಿತಾಂಶದಿಂದ ಅವರಿಗೆ ಯಾವುದೇ ರೀತಿ ಮುಖಭಂಗ ಆಗಿಲ್ಲ. ಇದರಿಂದ ಮತ್ತಷ್ಟು ಸಿಂಪಥಿ ಬಂದಿದೆ. ಅವರು ಲೋಕೋಪಯೋಗಿ ಸಚಿವರಾದ ಮೇಲೆ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿವೆ. ಅವರ ನಾಯಕತ್ವದ ಬಗ್ಗೆ ಯಾರು ಪ್ರಶ್ನೆ ಮಾಡುವುದಿಲ್ಲ. ನಮ್ಮ ರಾಜ್ಯಕ್ಕೆ ಅವರ ಅವಶ್ಯಕತೆ ಇದೆ ಎಂದರು.

ಪರಿಸರ ನೈರ್ಮಲ್ಯದ ಜವಾಬ್ದಾರಿ ಇರಲಿ

ಧಾರವಾಡ:ಇಲ್ಲಿಯ ಗಾಂಧಿನಗರದ ರುಡ್‌ಸೆಟ್ ಸಂಸ್ಥೆ ವತಿಯಿಂದ ಗಾಂಧಿನಗರ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಜಿಲ್ಲಾ ಅಗ್ರಣೀಯ ಪ್ರಬಂಧಕ ಬಸವರಾಜ ಗಡದದವರ ಕೇಂದ್ರ ಸರ್ಕಾರದ ಸ್ವಚ್ಛತಾ ಹಿ ಸೇವಾ-2025 ಕಾರ್ಯಕ್ರಮದಡಿ ರುಡ್‌ಸೆಟ್ ಹತ್ತಿರ ರಸ್ತೆಯಲ್ಲಿ ಕಸ ಗುಡಿಸುವ ಮತ್ತು ಸಸಿ ನೆಡುವ ಮೂಲಕ ಈ ಕಾರ್ಯಕ್ಕೆ ಚಾಲನೆ ನೀಡಿದರು. ಪ್ರತಿಯೊಬ್ಬರು ಪರಿಸರದ ಸ್ವಚ್ಛತೆಗೆ ಗಮನ ಹರಿಸಬೇಕು, ಸ್ವಚ್ಛತೆಯಿಂದ ಉತ್ತಮ ಆರೋಗ್ಯವಲ್ಲದೇ, ಸುಂದರ ಪರಿಸರ ಸೃಷ್ಟಿಸಬಹುದು. ನಮ್ಮ ಪರಿಸರ ನಮ್ಮ ಹೆಮ್ಮೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ತಿಳಿಸಿದರು. ರುಡ್‌ಸೆಟ್ ಸಂಸ್ಥೆಯ ನಿರ್ದೇಶಕ ಪೃಥ್ವಿರಾಜ್ ಜಿ.ಪಿ., ರುಡ್‌ಸೆಟ್ ಸಂಸ್ಥೆಯು ತರಬೇತಿ ನೀಡುವುದಲ್ಲದೆ ಪರಿಸರ ಜಾಗೃತಿ, ಆರೋಗ್ಯ ಶಿಬಿರ, ಕಾನೂನು ಸೇವೆಯಂಥ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ ಎಂದರು. ಸಂಸ್ಥೆಯ ಹಿರಿಯ ಉಪನ್ಯಾಸಕ ಜಗದೀಶ ಪೂಜಾರ, ಕಚೇರಿ ಹಿರಿಯ ಸಹಾಯಕರಾದ ಮಧ್ವರಾಜ ಭಟ್, ಮಹೇಶ ಗೌಡರ, ಚಂದ್ರು ಕುರಕುಂದಿ, ಶಿವಪ್ಪ ಮೊಕಾಶಿ ಇದ್ದರು.

ನಾಳೆ ರಂಭಾಪುರಿ ಶ್ರೀಗಳ ಪುಣ್ಯಾರಾಧನೆ

ಹುಬ್ಬಳ್ಳಿ:ರಂಭಾಪುರಿ ಜಗದ್ಗುರು ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳ 44ನೇ ಪುಣ್ಯಾರಾಧನೆಯನ್ನು ತಾಲೂಕಿನ ನೂಲ್ವಿ ಗ್ರಾಮದಲ್ಲಿ ಅ. 6ರಂದು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ ಶ್ರೀಗಳ ಶಿಲಾಮೂರ್ತಿಗೆ ರುದ್ರಾಭಿಷೇಕ, ಮಹಾಪೂಜೆ ನೆರವೇರಿಸಿ ಸಕಲ ವಾದ್ಯ, ಮೇಳಗಳೊಂದಿಗೆ ಶ್ರೀಗಳ ಭಾವಚಿತ್ರದೊಂದಿಗೆ ಮಧ್ಯಾಹ್ನ 2ಕ್ಕೆ ಮೆರವಣಿಗೆ ನಡೆಯಲಿದೆ. ಸಂಜೆ 5ಕ್ಕೆ ಶ್ರೀಗಳವರ ಶಿಲಾ ಮಂದಿರದಲ್ಲಿ ಧರ್ಮಸಭೆ ಜರುಗಲಿದೆ. ಮುಕ್ತಿಮಂದಿರ ಧರ್ಮಕ್ಷೇತ್ರದ ಶ್ರೀಷಟಸ್ಥಲ ಬ್ರಹ್ಮ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಗ್ರಾಮದ ವೇದಮೂರ್ತಿ ಶಿವಾನಂದ ಶ್ರೀಗಳ ನೇತೃತ್ವ ವಹಿಸುವರೆಂದು ಪ್ರಕಟಣೆ ತಿಳಿಸಿದೆ.

ಹಿಂಗಾರು ಬಿತ್ತನೆ: 30000 ಕ್ವಿಂಟಲ್ ಬಿತ್ತನೆ ಬೀಜ ವಿತರಣೆ ಗುರಿ: ಲಾಡ್

ಹಿಂಗಾರು ಬಿತ್ತನೆ ಬೀಜ ವಿತರಣೆಗೆ ಧಾರವಾಡದಲ್ಲಿ ಕಾರ್ಮಿಕ ಸಚಿವ ಚಾಲನೆ

● **ಕನ್ನಡಪ್ರಭ ವಾರ್ತೆ** ಧಾರವಾಡ

ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಿಸಲು 14 ರೈತ ಸಂಪರ್ಕ ಕೇಂದ್ರ ಹಾಗೂ 13 ಹೆಚ್ಚುವರಿ ಬೀಜ ವಿತರಣಾ ಕೇಂದ್ರ, ಒಳಗೊಂಡಂತೆ ಒಟ್ಟು 27 ಬೀಜ ವಿತರಣಾ ಕೇಂದ್ರ ತೆರೆಯಲಾಗಿದೆ ಎಂದು ಸಚಿವ ಸಂತೋಷ ಲಾಡ್ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಕೃಷಿ ಇಲಾಖೆಯಿಂದ ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿಗೆ ವಿತರಿಸುವ ವಿವಿಧ ಬೀಜಗಳನ್ನು ರೈತರಿಗೆ ವಿತರಿಸಿ, ಮಾತನಾಡಿದರು. ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದ್ದು, ಹಿಂಗಾರು ಬಿತ್ತನೆ ಪ್ರಾರಂಭವಾಗಿದೆ. ಕೃಷಿ ಇಲಾಖೆಯು ಹಿಂಗಾರು ಹಂಗಾಮಿಗೆ ಕಡಲೆ, ಗೋದಿ, ಜೋಳ, ಮೆಕ್ಕೆಜೋಳ, ಶೇಂಗಾ ಹಾಗೂ ವಿವಿಧ ಬೆಳೆಗಳ ಬೀಜಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಮಾರಾಟ ಮಾಡಲಾಗುತ್ತಿದೆ. ರೈತರು ಇದರ ಸದುಪಯೋಗ ಪಡೆಯಬೇಕೆಂದು ಹೇಳಿದರು.

ಅಳ್ನಾವರ, ಧಾರವಾಡ, ಅಮ್ಮಿನಭಾವಿ, ಹೆಚ್ಚುವರಿ ಬೀಜ ವಿತರಣಾ ಕೇಂದ್ರ ನರೇಂದ್ರ, ಹೆಬ್ಬಳ್ಳಿ, ಉಪ್ಪಿನ ಬೆಟಗೇರಿ, ಕಲಘಟಗಿ, ತ.ಹೊನ್ನಳ್ಳಿ, ದುಮ್ಮವಾಡ. ಛಬ್ಬಿ, ಶಿರಗುಪ್ಪಿ, ಹುಬ್ಬಳ್ಳಿ, ಹೆಚ್ಚುವರಿ ಬೀಜ ವಿತರಣಾ ಕೇಂದ್ರ ನೂಲ್ವಿ, ಕುಸುಗಲ್ಲ, ಕೋಳಿವಾಡ, ಬಿಡನಾಳ. ಕುಂದಗೋಳ, ಸಂಶಿ. ಹೆಚ್ಚುವರಿ ಬೀಜ ವಿತರಣಾ ಕೇಂದ್ರ ಯಲಿವಾಳ, ಶಿರೂರು, ಅಣ್ಣಿಗೇರಿ, ಮೊರಬ್ಬ ಯರಗುಪ್ಪಿ, ಹೆಚ್ಚುವರಿ ಬೀಜ ವಿತರಣಾ ಕೇಂದ್ರ ಶಲವಡಿ, ನವಲಗುಂದಗಳಲ್ಲಿ ರೈತರಿಗೆ ಬೀಜ ವಿತರಣೆ ಮಾಡಲಾಗುತ್ತಿದೆ ಎಂದರು.

ರೈತರು ಕಡಲೆ, ಗೋದಿ, ಜೋಳ, ಮೆಕ್ಕೆಜೋಳ, ಶೇಂಗಾ ಹಾಗೂ ವಿವಿಧ ಬೆಳೆಗಳನ್ನು ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡುತ್ತಾರೆ. ಹಾಗಾಗಿ ಇಲಾಖೆ ವತಿಯಿಂದ ಸಹಾಯಧನದಡಿ ಬೀಜ ವಿತರಿಸಲು ಕಡಲೆ 28, 799 ಕ್ವಿಂಟಲ್, ಗೋಧಿ 385 ಕ್ವಿಂಟಲ್, ಜೋಳ 300 ಕ್ವಿಂಟಲ್, ನೆಲಗಡಲೆ 276 ಕ್ವಿಂಟಲ್ ಹಾಗೂ ಇನ್ನಿತರೆ ಬೀಜ ಒಳಗೊಂಡಂತೆ ಒಟ್ಟು 29906 ಕ್ವಿಂಟಲ್ ಬಿತ್ತನೆ ಬೀಜ ವಿತರಣೆ ಗುರಿ ಹೊಂದಲಾಗಿದೆ. ಈಗಾಗಲೇ ವಿವಿಧ ಇನ್ನಿತರೆ ಬೀಜ ಉತ್ಪಾದನಾ ಸಂಸ್ಥೆಗಳ ಬೀಜಗಳನ್ನು ಎಲ್ಲ ಬೀಜವಿತರಣಾಕೇಂದ್ರಗಳಲ್ಲಿ ದಾಸ್ತಾನು ಮಾಡ ಲಾಗಿದ್ದು ವಿತರಣೆ ಪ್ರಾರಂಭವಾಗಿದೆ ಎಂದರು. ಈ ವೇಳೆ ಶಾಸಕ ಎನ್.ಎಚ್. ಕೋನರಡ್ಡಿ, ಜಿಪಂ ಸಿಇಒ ಭುವನೇಶ ಪಾಟೀಲ, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಅಂತರವಳ್ಳಿ ಸೇರಿದಂತೆ ಕೃಷಿ ಇಲಾಖೆ ಅಧಿಕಾರಿಗಳು, ರೈತ ಮುಖಂಡರು, ರೈತರು ಹಾಗೂ ಇತರರು ಇದ್ದರು.

ರೈತರಿಗೆ ಬಿತ್ತನೆ ಬೀಜವನ್ನು ಸಚಿವ ಸಂತೋಷ ಲಾಡ್ ವಿತರಿಸಿದರು.

- ಕಡಲೆ, ಗೋದಿ, ಜೋಳ, ಮೆಕ್ಕೆಜೋಳ, ಶೇಂಗಾ ಹಾಗೂ ವಿವಿಧ ಬೆಳೆಗಳ ಬೀಜಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಮಾರಾಟ ಮಾಡಲಾಗುತ್ತಿದೆ.
- ಬೀಜ ವಿತರಣಾ ಕೇಂದ್ರಗಳಲ್ಲಿ ದಾಸ್ತಾನು ಮಾಡ ಲಾಗಿದ್ದು ವಿತರಣೆ ಪ್ರಾರಂಭವಾಗಿದೆ
- ಕಡಲೆ 28, 799 ಕ್ವಿಂಟಲ್, ಗೋಧಿ 385 ಕ್ವಿಂಟಲ್, ಜೋಳ 300 ಕ್ವಿಂಟಲ್, ನೆಲಗಡಲೆ 276 ಕ್ವಿಂಟಲ್ ದಾಸ್ತಾನು
- 14 ರೈತ ಸಂಪರ್ಕ ಕೇಂದ್ರ ಹಾಗೂ 13 ಹೆಚ್ಚುವರಿ ಒಳಗೊಂಡಂತೆ ಒಟ್ಟು 27 ಬೀಜ ವಿತರಣಾ ಕೇಂದ್ರ ಓಪನ್

ಅಕ್ಕ ಕೆಫೆ ಉದ್ಘಾಟನೆ

ಮಹಿಳಾ ಸ್ವ-ಸಹಾಯ ಗುಂಪುಗಳಿಂದಲೇ ನಿರ್ವಹಣೆ

● **ಕನ್ನಡಪ್ರಭ ವಾರ್ತೆ** ಧಾರವಾಡ

ರಾಜ್ಯದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಸ್ವ-ಸಹಾಯ ಗುಂಪುಗಳ ಮಹಿಳೆಯರೆ ನಿರ್ವಹಿಸಲು ಅವಕಾಶವಾಗುವಂತೆ ಅಕ್ಕ ಕೆಫೆ ರೂಪಿಸಲಾಗಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಇದು ದೊಡ್ಡ ಕೊಡುಗೆ ನೀಡಲಿದೆ ಎಂದು ಸಚಿವ ಸಂತೋಷ ಲಾಡ್ ಹೇಳಿದರು.

ಜಿಲ್ಲಾಪಂಚಾಯಿತಿಹತ್ತಿರದಕಟ್ಟಡದಲ್ಲಿ ಕಬ್ಬೆನೂರು ಗ್ರಾಮದ ಕಾಮಧೇನು ಮಹಿಳಾ ಸ್ವ-ಸಹಾಯ ಸಂಘ ಆರಂಭಿಸಿರುವ ಅಕ್ಕ ಕೆಫೆ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರ ಜೀವನೋಪಾಯ ಚಟುವಟಿಕೆಗಳಿಗೆ ಹೆಚ್ಚಿನ ಉತ್ತೇಜನ ನೀಡಲು ರಾಜ್ಯ ಸರ್ಕಾರ ಅಕ್ಕ ಕೆಫೆಯನ್ನು ಬಜೆಟ್‌ನಲ್ಲಿ ಘೋಷಿಸಿದೆ. ಸರ್ಕಾರದ ಆದೇಶದಂತೆ ಗ್ರಾಮೀಣ ಪ್ರದೇಶದಲ್ಲಿ ಸ್ಥಳೀಯ ಆಹಾರವನ್ನು ಶುಚಿ-ರುಚಿಯಾಗಿ ಕೈಗೆಟಕುವ ದರದಲ್ಲಿ ಒದಗಿಸಲು ಮಹಿಳೆಯರೇ ನಡೆಸುವ 50 ಕೆಫೆ ಸಂಜೀವಿನಿ (ಅಕ್ಕ ಕೆಫೆ) ಕ್ಯಾಂಟೀನ್‌ಗಳನ್ನು ಸ್ಥಾಪಿಸಲು ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ. ಅದರಂತೆ ಜಿಲ್ಲಾ ಕೇಂದ್ರ ಸ್ಥಾನ ಮತ್ತು ಎಲ್ಲ ತಾಲೂಕು ಕೇಂದ್ರ ಸ್ಥಾನಗಳಲ್ಲಿ ಅಕ್ಕ ಕೆಫೆ ಆರಂಭಿಸಲಾಗುತ್ತಿದೆ ಎಂದು ತಿಳಿಸಿದರು.

ಈ ವೇಳೆ ಶಾಸಕ ಎನ್.ಎಚ್. ಕೋನರಡ್ಡಿ, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್. ಪಾಟೀಲ್ ಹಾಗೂ ಜಿಪಂ ಸಿಇಒ ಭುವನೇಶ ಪಾಟೀಲ್, ಎಸ್ಪಿ ಗುಂಜನ ಆರ್ಯ, ಪ್ರೊಬೆಷನರಿ ಐಎಎಸ್ ಅಧಿಕಾರಿ ರೀತಿಕಾ ವರ್ಮಾ, ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಹಾಗೂ ಕಾಮಧೇನು ಮಹಿಳಾ ಸ್ವ-ಸಹಾಯ ಸಂಘದ ಅಧ್ಯಕ್ಷೆ ರಾಜಶ್ರೀ ಮಂಜುನಾಥ ಪವಾಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇದೇ ವೇಳೆ ಕೆಫೆಯಲ್ಲಿ ಉಪಾಹಾರ ಸೇವಿಸಿ ರುಚಿ ಕೂಡ ಸಚಿವರು ಸವೆದರು. ಈ ವೇಳೆ ಸಚಿವ ಲಾಡ್ ಕ್ಯಾಂಟಿನ್‌ನಲ್ಲಿ ತರಕಾರಿ ಕತ್ತರಿಸುವ ಮೂಲಕ ಮಹಿಳೆಯರಿಗೆ ಪ್ರೋತ್ಸಾಹ ನೀಡಿದರು.

ಜಿಲ್ಲೆಗೆ ಎರಡು ಅಕ್ಕ ಕೆಫೆಗಳ ಸ್ಥಾಪನೆಗಾಗಿ ಸ್ಥಳ ಗುರುತಿಸಿ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿತ್ತು. ಅದು ಅನುಮೋದನೆಗೊಂಡು ಅನುದಾನ ಬಿಡುಗಡೆಯಾಗಿದೆ. ಈ ಕೆಫೆ ಅನುಷ್ಠಾನಕ್ಕಾಗಿ ಜಿಲ್ಲಾ ಹಂತದಲ್ಲಿ ಜಂಟಿ ನಿರ್ದೇಶಕರು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಅಧ್ಯಕ್ಷತೆಯಲ್ಲಿ 7 ಜನರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

ಅಕ್ಕ ಕೆಫೆಯನ್ನು ಸಚಿವ ಸಂತೋಷ ಲಾಡ್ ಉದ್ಘಾಟಿಸಿದರು.

ಆರ್‌ಎಸ್‌ಎಸ್ ಶತಾಬ್ದಿ ವರ್ಷ: ಇಂದು ಪಥಸಂಚಲನ

7000 ಗಣವೇಷಧಾರಿಗಳು ಭಾಗಿ | ಅಹಿತಕರ ಘಟನೆ ನಡೆಯದಂತೆ ಪೊಲೀಸರಿಂದ ನಿನ್ನೆ ರೂಟ್ ಮಾರ್ಚ್, ವಾಹನ ನಿಲುಗಡೆ ವ್ಯವಸ್ಥೆ

● **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿ ವರ್ಷ ಹಾಗೂ ವಿಜಯದಶಮಿ ನಿಮಿತ್ತ ಅ. 5ರಂದು ಮಧ್ಯಾಹ್ನ 3ಕ್ಕೆ ನಗರದ ನೆಹರು ಮೈದಾನದಿಂದ ಪಥ ಸಂಚಲನ ನಡೆಯಲಿದೆ. 7000 ಗಣವೇಷಧಾರಿಗಳು ಪಾಲ್ಗೊಳ್ಳಲಿದ್ದಾರೆ.

ಎರಡು ಮಾರ್ಗಗಳಲ್ಲಿ ಪಥಸಂಚಲನ ನಡೆಯಲಿದ್ದು, ಮೊದಲ ಮಾರ್ಗ ನೆಹರು ಮೈದಾನದಿಂದ ಕೃಷ್ಣ ಭವನ, ಸರ್ ಸಿದ್ದಪ್ಪ ಕಂಬಳಿ ಮಾರ್ಗ,

ಸಂಗೊಳ್ಳಿ ರಾಯಣ್ಣ ವೃತ್ತ, ದಾಜಿಬಾನ ಪೇಟೆಯ ಶ್ರೀತುಳಜಾಭವಾನಿ ವೃತ್ತ, ಪೆಂಡಾರ ಗಲ್ಲಿ ಶ್ರೀಶಂಕರ ಮಠ, ಕಂಚಗಾರ ಗಲ್ಲಿ, ಹಿರೇಪೇಟೆ ಸರಾಫ್ ಗಟ್ಟಿ ವೃತ್ತ, ಜವಳಿ ಸಾಲ, ಬೆಳಗಾವಿ ಗಲ್ಲಿ ದುರ್ಗದ ಬೈಲ್ ವೃತ್ತ. ಎರಡನೇ ಪಥಸಂಚಲನ ನೆಹರು ಮೈದಾನ, ಟೌನ್ ಹಾಲ್, ಜೆ.ಸಿ. ನಗರ, ಶಕ್ತಿ ರಸ್ತೆ, ಸ್ಟೇಶನ್ ರಸ್ತೆ, ಗಣೇಶ ಪೇಟೆ ವೃತ್ತ, ಸಿಬಿಟಿ ಮಕಾನದಾರ ಗಲ್ಲಿ, ಮಂಗಳವಾರ ಪೇಟೆ, ಇಟಗಿ ಮಾರುತಿ ಗಲ್ಲಿ, ರಾಧಾಕೃಷ್ಣ ಗಲ್ಲಿ, ದುರ್ಗದ ಬೈಲ್ ವರೆಗೆ ನಡೆದು ಎರಡೂ ಸಂಚಲನಗಳು ಸೇರಲಿವೆ. ಬಳಿಕ ಬ್ರಾಡವೇ, ಶಿವಾಜಿ ವೃತ್ತ, ಕೊಪ್ಪಿಕರ ರಸ್ತೆ ಮೂಲಕ ಕೃಷ್ಣ ಭವನ ಮಾರ್ಗವಾಗಿ ನೆಹರು ಮೈದಾನದಲ್ಲಿ ಸಂಚಲನ ಮುಕ್ತಾಯವಾಗಲಿದೆ.

ಸಂಜೆ 5.45ಕ್ಕೆ ನೆಹರು ಮೈದಾನದಲ್ಲಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದ್ದು, ಸಿದ್ದಾರೂಢ ಮಠದ ಚೇರ್ಮನ್ ಸಿ.ಎ. ಚೆನ್ನವೀರ ಮುಂಗರವಾಡಿ, ಆರ್‌ಎಸ್‌ಎಸ್ ಸಹ ಸರಕಾರ್ಯವಾಹಕರಾದ ಕೃಷ್ಣಗೋಪಾಲ ಭಾಗವಹಿಸುವರು. ಕಾರ್ಯಕ್ರಮದಲ್ಲಿ ಸಾವಿರಾರು ಜನ ಭಾಗವಹಿಸುವ ನಿರೀಕ್ಷೆ ಇದ್ದು, ಕಾರ್ಯಕ್ರಮಕ್ಕೆ ಬರುವವರು ತಮ್ಮ ವಾಹನಗಳ ನಿಲ್ಲಿಸಲು ಐದು ಕಡೆಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ಹುಬ್ಬಳ್ಳಿಯ ಮಹಾನಗರ ಪಾಲಿಕೆಯ ಕಚೇರಿ ಆವರಣ, ಚಿಟಗುಪ್ಪಿ ಆಸ್ಪತ್ರೆಯ ಆವರಣ, ಲ್ಯಾಮಿಂಗ್ಟನ್ ಶಾಲೆ, ಸೆಟ್‌ಲೈಟ್ ಕಾಂಪ್ಲೆಕ್ಸ್ ಬೇಸ್ಮೆಂಟ್ ಮತ್ತು ಯು ಮಾಲ್ ಹಿಂದುಗಡೆ ಇರುವ ಖಾಲಿ ಜಾಗದಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಕೃಷ್ಣ ಭವನ, ಚೇಂಬರ್‌ಆಫ್ ಕಾಮರ್ಸ್, ಟೌನ್ ಹಾಲ್ ಮತ್ತು ಮೈದಾನದ ಸುತ್ತಮುತ್ತ ಎಲ್ಲೂ ವಾಹನ ನಿಲುಗಡೆ ಇರುವುದಿಲ್ಲ ಎಂದು ಸಂಘಟಕರು ತಿಳಿಸಿದ್ದಾರೆ.

ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ನೇತೃತ್ವದಲ್ಲಿ, ನಗರದಲ್ಲಿ ರೂಟ್ ಮಾರ್ಚ್ ನಡೆಯಿತು.

ರೂಟ್ ಮಾರ್ಚ್

ಆರ್‌ಎಸ್‌ಎಸ್ ಪಥಸಂಚಲನ ಭಾನುವಾರ ನಡೆಯುವ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಶನಿವಾರ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ನೇತೃತ್ವದಲ್ಲಿ, ನಗರದಲ್ಲಿ ರೂಟ್ ಮಾರ್ಚ್ ನಡೆಯಿತು. ನೆಹರು ಮೈದಾನದಿಂದ ಆರಂಭವಾದ ಪೊಲೀಸ್ ಪರೇಡ್ ಕೊಪ್ಪಿಕರ ರಸ್ತೆ, ದುರ್ಗದಬೈಲ್, ಸಿಬಿಟಿ ಸೇರಿದಂತೆ ವಿವಿಧ ಭಾಗಗಳಲ್ಲಿ ನಡೆಯಿತು.

ಪಥಸಂಚಲನ ಸ್ವಾಗತಿಸಿ

● **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಹುಬ್ಬಳ್ಳಿ ಮಹಾನಗರದ ವತಿಯಿಂದ ಸಂಘ ಶತಾಬ್ದಿ ಹಾಗೂ ವಿಜಯ ದಶಮಿ ನಿಮಿತ್ತ ಭಾನುವಾರ ನಗರದಲ್ಲಿ ನಡೆಯಲಿರುವ ಭವ್ಯ ಪಥಸಂಚಲನದ ಮಾರ್ಗದಲ್ಲಿಯ ವ್ಯಾಪಾರಸ್ಥರು ಹಾಗೂ ಪ್ರಮುಖರನ್ನು ಶಾಸಕ ಮಹೇಶ ಟೆಂಗಿನಕಾಯಿ ಭೇಟಿ ಮಾಡಿದರು.

ಈ ವೇಳೆ ಪಥಸಂಚಲನದ ಮಾರ್ಗದ ಮನೆ ಹಾಗೂ ಮಳಿಗೆಗಳ ಮುಂದೆ ಭಾರತ ಮಾತೆ ಹಾಗೂ ಮಹಾಪುರುಷರ ಭಾವಚಿತ್ರ ಇರಿಸಿ, ಪಥಸಂಚಲನಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸ್ವಾಗತಿಸುವಂತೆ ಮನವಿ ಮಾಡಿ ದರು.

ಈ ವೇಳೆ ಮಹಾನಗರ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ, ಉಪಮೇಯರ್ ಸಂತೋಷ ಚವ್ಹಾಣ, ಪಾಲಿಕೆಯ ಸದಸ್ಯರು, ಪಕ್ಷದ ಪ್ರಮುಖರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹಣಕಾಸಿನ ಸಾಕ್ಷರತೆ ಮುಖ್ಯ

ಕರ್ನಾಟಕ ಕಲಾ ಕಾಲೇಜಿನ ಅರ್ಥಶಾಸ್ತ್ರ ವಿಭಾಗದಲ್ಲಿ ನಡೆದ ಸಮಾರಂಭದಲ್ಲಿ ಡಾ. ಸಿ.ಪಿ. ಮನೋಹರ ಮಾತನಾಡಿದರು.

● **ಕನ್ನಡಪ್ರಭ ವಾರ್ತೆ** ಧಾರವಾಡ

ಸಾಮಾನ್ಯ ವ್ಯಕ್ತಿಯು ಸಹ ಹಣಕಾಸಿನ ಸಾಕ್ಷರತೆ ಅರಿತು, ಹಣಕಾಸಿನ ನಿರ್ವಹಣೆ ಅಳವಡಿಸಿಕೊಳ್ಳುವುದು ಆಧುನಿಕ ಯುಗದಲ್ಲಿ ಅಗತ್ಯವಿದೆ ಎಂದು ಸಹ ಪ್ರಾಧ್ಯಾಪಕ ಡಾ. ಸಿ.ಪಿ. ಮನೋಹರ ಹೇಳಿದರು.

ಕರ್ನಾಟಕ ಕಲಾ ಕಾಲೇಜಿನ ಅರ್ಥಶಾಸ್ತ್ರ ವಿಭಾಗದಲ್ಲಿ ನಡೆದ ಸಮಾರಂಭದಲ್ಲಿ ಜೀವನದಲ್ಲಿ ಅರ್ಥಶಾಸ್ತ್ರದ ಮಹತ್ವ ಕುರಿತು ಮಾತನಾಡಿದ ಅವರು, ಜೀವನದಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಫಲವಾದಾಗ ಅದರ ಮೂಲ ಸಮಸ್ಯೆ ಅರಿತು ಸರಿಪಡಿಸಿಕೊಳ್ಳಬಹುದು ಅಗತ್ಯ. ಭವಿಷ್ಯದಲ್ಲಿ ನಾವು ಏನಾಗಬೇಕು ಎಂಬುದನ್ನು ನಿರ್ಧರಿಸುವುದು, ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಶಿಕ್ಷಕರ ಮಾರ್ಗದರ್ಶನ ಪಡೆದುಕೊಂಡು ಜೀವನದಲ್ಲಿ ಯಶಸ್ಸು ಪಡೆಯಬೇಕೆಂದು ಸಲಹೆ ನೀಡಿದರು.

ಅರ್ಥಶಾಸ್ತ್ರದ ಅಧ್ಯಯನದಿಂದ ಹೆಚ್ಚು ಜ್ಞಾನ ಪಡೆಯಲುಸಾಧ್ಯ. ಉತ್ತಮವಾದ ಕೌಶಲಗಳನ್ನು ವಿದ್ಯಾರ್ಥಿದೆಸೆಯಲ್ಲಿ ಅಳವಡಿಸಿಕೊಳ್ಳಬೇಕು ಎಂದ ಅವರು, ಅರ್ಥಶಾಸ್ತ್ರ ವಿಷಯದ ಅಧ್ಯಯನದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚು ಉಪಯುಕ್ತವಾಗಿದೆ ಎಂದರು.

ಡಾ. ಸಿ. ಅನ್ನಪೂರ್ಣ ಮಾತನಾಡಿ, ಪದವಿ ಓದುವಾಗ ಹಂತ-ಹಂತವಾಗಿ ವಿದ್ಯಾರ್ಥಿಗಳು ಪ್ರಬುದ್ಧ ವಿಚಾರ ಬೆಳೆಸಿಕೊಳ್ಳಬೇಕು. ಅರ್ಥಶಾಸ್ತ್ರ ಅಧ್ಯಯನದ ಜತೆಗೆ ಇತರೆ ವಿಷಯ ಓದಲು ಪ್ರಯತ್ನಿಸಬೇಕು ಎಂದು ಹೇಳಿದರು.

ಡಾ. ಓದೇಗೌಡ, ಆರ್.ಟಿ, ಡಾ. ರಾಘವೇಂದ್ರ ಪಾಟೀಲ, ಡಾ. ನಯನಾ ಪಾಟೀಲ, ಡಾ. ಬಸವರಾಜ ಮತ್ತು ವಿದ್ಯಾರ್ಥಿ ಕಾರ್ಯದರ್ಶಿಗಳಾದ ಶ್ರೀಗೌರಿ ಜೋಶಿ, ಮತ್ತು ಆನಂದ ಬೆಳ್ಳಿಕಟ್ಟಿ ಇದ್ದರು.

ವಿಕಲಚೇತನರಿಗೆ ತರಬೇತಿ

ಹುಬ್ಬಳ್ಳಿ: ಸಂತೋಷ ನಗರದ ಸಾಮರ್ಥ್ಯ ಸೌಧದಲ್ಲಿ ಹುಬ್ಬಳ್ಳಿ ತಾಲೂಕು ಪಂಚಾಯಿತಿ ಹಾಗೂ ಬೆಂಗಳೂರಿನ ಎಪಿಡಿ ಸಂಸ್ಥೆ ಸಹಯೋಗದಲ್ಲಿ ಶನಿವಾರ 2025-26 ನೇ ಸಾಲಿನಲ್ಲಿ ವಿಕಲಚೇತನರ ಉದ್ಯೋಗ ಮತ್ತು ತರಬೇತಿಗೆ ಆಯ್ಕೆ ಮಾಡುವ ಉದ್ದೇಶದಿಂದ ತರಬೇತಿ ಕಾರ್ಯಕ್ರಮ ನಡೆಯಿತು. ಜಿಲ್ಲಾವಿಕಲಚೇತನರಕಲ್ಯಾಣಾಧಿಕಾರಿ ಸವಿತಾ ಕಾಳೆ ಮಾತನಾಡಿ, ಇಲಾಖೆ ಯೋಜನೆಗಳ ಸೌಲಭ್ಯವನ್ನು ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ದಾಖಲೆ ಕಳೆದುಹೋಗಿದೆ

ನಾನು ಹರಿಣಿ ಕೋಂ. ಹರೀಶ್ ರೇವಣಕರ್, ನಿವಾಸಿ: ಹುಬ್ಬಳ್ಳಿಯ ಮರಾಠಾ ಗಲ್ಲಿ, ಉದ್ಯೋಗ ವ್ಯವಹಾರ, ಅಮರಗೋಳ್ ಆಸ್ತಿ, ಬ್ಲಾಕ್ ಸಂಖ್ಯೆ 156 ಪ್ಲಾಟ್ ಸಂಖ್ಯೆ 66,68,69,89,90,92 ಹೊಂದಿರುವ ಆಸ್ತಿಯ ಖರೀದಿ ಪತ್ರದ ದಾಖಲೆಯನ್ನು 25-9-2025 ರಂದು ಕೇಶ್ವಾಪುರ್ ನವೀನ್ ಪಾರ್ಕ್ ನಲ್ಲಿ ಕಳೆದುಕೊಂಡಿದ್ದೇನೆ. ಕಳೆದುಹೋದ ದಾಖಲೆಗಳನ್ನು ಹುಡುಕಿಕೊಟ್ಟವರಿಗೆ ಸೂಕ್ತ ಬಹುಮಾನ ನೀಡಲಾಗುವುದು. ಮೊ. 9886727644

ಕ್ರಿ. ಮಿ. ನಂ. 102/2025

ಮಾನ್ಯ 2ನೇ ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ : **ಶ್ರೀ ದಿವಾನಸಾಬ ತಂದೆ ಬುಡ್ಡೇಸಾಬ ದಾವಲಖಾನವರ**, ವಯಾ : 51 ವರ್ಷ, ಉದ್ಯೋಗ : ಕೂಲಿ ಕೆಲಸ, ಸಾ॥ ಕಟ್ಟಿಗೆ ಅಡ್ಡೆ ಹತ್ತಿರ, ನೂಲ್ವಿ, ತಾ॥ ಹುಬ್ಬಳ್ಳಿ, ಜಿ॥ ಧಾರವಾಡ.

ವಿರುದ್ಧ

ಎದುರುಗಾರರು : ಮಾನ್ಯ ತಹಶೀಲ್ದಾರರು, ಗ್ರಾಮೀಣ ವಿಭಾಗ, ಜನನ ವ ಮರಣ ನೋಂದಣಿ ಅಧಿಕಾರಿಗಳು, ಮಿನಿ ವಿಧಾನ ಸೌಧ, ಹುಬ್ಬಳ್ಳಿ,

ನೋಟಿಸ

ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ ನಿಮ್ಮ ವಿರುದ್ಧ ನ್ಯಾಯಾಲಯದಲ್ಲಿ,

ಅರ್ಜಿದಾರನ ತಾಯಿಯಾದ **ಶ್ರೀಮತಿ ಮೆಹಬೂಬಿ ಕೋಂ. ಬುಡ್ಡೇಸಾಬ ದಾವಲಖಾನವರ ಇವರು ದಿ : 27-06-2006 ರಂದು ನೂಲ್ವಿ ಸ್ವಗ್ರಾಮದಲ್ಲಿರುವ ಮನೆಯಲ್ಲಿ ಮರಣ ಹೊಂದಿರುತ್ತಾರೆ.** ಸದರಿ ಅರ್ಜಿದಾರ ತನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಪಡೆಯಲು ಎದುರುಗಾರರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದು ಇರುತ್ತದೆ. ಸದರ ಮರಣ ದಾಖಲಾತಿ ಕುರಿತು ಯಾರಾದರೂ ಯಾವುದೇ ರೀತಿಯ ತಂಟೆ ವ ತಕರಾರು ಇದ್ದಲ್ಲಿ ಅವರ ಹಾಜರಾತಿಗಾಗಿ ದಿನಾಂಕ: 07-11-2025 ರಂದು ಬೆಳಿಗ್ಗೆ 10-30 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರೀ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕವಾಗಲಿ ತಕರಾರು ಸಲ್ಲಿಸಬಹುದು, ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳುವುದು. ನ್ಯಾಯಾಲಯದ ಮೊಹರಿನೊಂದಿಗೆ ದಿ: 04-10-2025 ರಂದು ನೀಡಲಾಯಿತು.

ಹುಬ್ಬಳ್ಳಿ (ಕೋರ್ಟ ಮೊಹರು)
ದಿ: 04-10-2025

ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು
ಮಾನ್ಯ 2ನೇ ಜೆ.ಎಂ.ಎಫ್.ಸಿ., ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ

ಎಸ್.ವಿ.ರಾಯ್ಕರ,
ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ

Godrej Finance Limited — Godrej | FINANCE A Godrej Capital Company

ಸಾರ್ವಜನಿಕ ಪ್ರಕಟಣೆ

ಭಾರತೀಯ ರಿಸರ್ವ್ ಬ್ಯಾಂಕ್ (ಬ್ಯಾಂಕೇತರ ಹಣಕಾಸು ಕಂಪನಿ – ಪ್ರಮಾಣ ಆಧಾರಿತ ನಿಯಂತ್ರಕ) ನಿರ್ದೇಶನಗಳು, 2023 ರ ಪರಿಚ್ಛೇದ 43 ರ ನಿಯಮಗಳ ಪ್ರಕಾರ 'ಗೋದ್ರೇಜ್ ಫೈನಾನ್ಸ್ ಲಿಮಿಟೆಡ್' ನಿಂದ ಸಾರ್ವಜನಿಕ ಪ್ರಕಟಣೆ

ಗೋದ್ರೇಜ್ ಫೈನಾನ್ಸ್ ಲಿಮಿಟೆಡ್ ("ಕಂಪನಿ" ಅಥವಾ "GFL") ಕಂಪನಿಗಳ ಕಾಯಿದೆ, 1956 ರ ಅಡಿಯಲ್ಲಿ ಸ್ಥಾಪಿಸಲಾದ ಒಂದು ಪಬ್ಲಿಕ್ ಲಿಮಿಟೆಡ್ ಕಂಪನಿಯಾಗಿದೆ (ಕಾರ್ಪೊರೇಟ್ ಐಡೆಂಟಿಫಿಕೇಷನ್ ನಂಬರ್: U67120MH1992PLC065457). ಇದು ಠೇವಣಿ ಪಡೆಯದ ಬ್ಯಾಂಕೇತರ ಹಣಕಾಸು ಸಂಸ್ಥೆ ("NBFC") ಆಗಿದ್ದು ಭಾರತೀಯ ರಿಸರ್ವ್ ಬ್ಯಾಂಕ್‌ನೊಂದಿಗೆ ನೋಂದಾಯಿಸಲ್ಪಟ್ಟಿದೆ (COR. No: 13.00368). GFL ನ ನೋಂದಾಯಿತ ಕಚೇರಿಯ ವಿಳಾಸ, ಗೋದ್ರೇಜ್ ಒನ್, ಪಿರೋಜ್‌ಷಾನಗರ್, ಈಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ, ವಿಖ್ರೋಳಿ (ಪೂ), ಮುಂಬೈ - 400079, ಮಹಾರಾಷ್ಟ್ರ.

ಈ ನೋಟಿಸ್ ಜಾರಿಯಾದ ದಿನಾಂಕದಿಂದ 3 ತಿಂಗಳ ಅವಧಿಯೊಳಗೆ, ಕಾರ್ಯನಿರ್ವಹಣೆಯ ಕಾರಣಗಳಿಂದಾಗಿ ಕಂಪನಿಯ ಶಾಖಾ ಕಚೇರಿಯನ್ನು ಪ್ರಸ್ತುತ ವಿಳಾಸ: ದಿ ಕೋವರ್ಕ್ ಸ್ಪೇಸಸ್, ಐಸಿಐಸಿಐ ಬ್ಯಾಂಕ್ ಮೇಲೆ, ಕಲಬುರ್ಗಿ ಕಟ್ಟೆ ಐಡೆಂಟಿಟಿ, ಗೋಕುಲ್ ರಸ್ತೆ, ಹುಬ್ಬಳ್ಳಿ – 580030, ಕರ್ನಾಟಕ ಇಲ್ಲಿಂದ, ಹೊಸ ವಿಳಾಸ: "ನಂ. 95, 2ನೇ ಮಹಡಿ, ಎನ್-ಪ್ರೈಡ್, ಪಿಂಟೋ ರಸ್ತೆ, ದೇಸಾಯಿ ಕ್ರಾಸ್, ಹುಬ್ಬಳ್ಳಿ – 580020, ಕರ್ನಾಟಕ ಇಲ್ಲಿಗೆ ಸ್ಥಳಾಂತರಿಸಲಾಗುತ್ತಿದೆ.

ಏನೇ ಪ್ರಶ್ನೆಗಳಿದ್ದರೂ ಗ್ರಾಹಕರು customer@godrejcapital.com ಇಮೇಲ್ ಮೂಲಕ ಸಂಪರ್ಕಿಸಬಹುದು.

ಈ ಸಂಬಂಧ ಯಾವುದೇ ಸ್ಪಷ್ಟೀಕರಣ ಅಥವಾ ವಿಚಾರಣೆಗಳಿದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 (ಮೂವತ್ತು) ದಿನಗಳೊಳಗೆ ಕಂಪನಿಯ ನೋಂದಾಯಿತ ಕಚೇರಿಯ, ಮುಖ್ಯ ಅನುಸರಣಾ ಅಧಿಕಾರಿ, ಶ್ರೀ ಯೋಗೇಶ್ ಜೈನ್ ಅವರಿಗೆ ಅಥವಾ gfl.compliance@godrejfinance.com ಗೆ ಕಳುಹಿಸಬಹುದು.

ಸಹಿ/-
ಗೋದ್ರೇಜ್ ಫೈನಾನ್ಸ್ ಲಿಮಿಟೆಡ್ ಪರವಾಗಿ

ಸ್ಥಳ: ಮುಂಬೈ
ದಿನಾಂಕ: 05.10.2025

Invesco Mutual Fund

The details of upcoming Investor Awareness Program(s) **('IAP')** are as follows:

Date	Time	Meeting ID	Passcode
October 8, 2025	6.00pm	272 658 041 726 1	dF2CQ6m5

Those who are interested to attend IAP are requested to email the details to us at iap@invesco.com

Date: October 5, 2025 This IAP is for women attendees only.

Mutual Fund investments are subject to market risks, read all scheme related documents carefully.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಹುಬ್ಬಳ್ಳಿ-ಧಾರವಾಡ ರಸ್ತೆ, ಅಮರಗೋಳ, ಹುಬ್ಬಳ್ಳಿ -580025

ಇ-ಮೇಲ್ : apmchubli@gmail.com | ಕಛೇರಿ/ ಟೆಲಿಫ್ಯಾಕ್ಸ್ : (0836) 2322251, 2324426

ಸಂ: ಕೃಮಾಇ : ಕೃಉಮಾಸ (ಹು) : ಹಂಚಿಕೆ : 1453 : 2025-26 : ದಿನಾಂಕ : 04/10/2025

ಪ್ರಕಟಣೆ

ವಿಷಯ: ಸಮಿತಿಯ ಪ್ರಕಟಣೆಯನ್ನು ಪ್ರಕಟಿಸುವ ಬಗ್ಗೆ.

ಯಾವತ್ತೂ ಪೇಟೆಕಾರ್ಯಕರ್ತರು, ಸಾರ್ವಜನಿಕರು ಹಾಗೂ ರೈತ ಬಾಂಧವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಸಮಿತಿಯಿಂದ ಸನ್ನದು ಪಡೆದು ವ್ಯವಹರಿಸುತ್ತಿರುವ ಪೇಟೆಕಾರ್ಯಕರ್ತರ ಸಂಸ್ಥೆಗಳಿಗೆ ಹಂಚಿಕೆಯಾದ ನಿವೇಶನದಲ್ಲಿ ನಿರ್ಮಿಸಿದ ಕಟ್ಟಡ ಸಹಿತ ನಿವೇಶನವನ್ನು ಸನ್ನದು ಪಡೆದ ವ್ಯವಹರಿಸುತ್ತಿರುವ ಬೇರೆ ಸಂಸ್ಥೆಗೆ ವರ್ಗಾವಣೆ ಕುರಿತು ಅರ್ಜಿ ಸಲ್ಲಿಸಿರುವ ವಿವರಗಳು ಈ ಕೆಳಕಂಡಂತಿವೆ:

ಕಟ್ಟಡ ಸಹಿತ ನಿವೇಶನ ವರ್ಗಾವಣೆ ಕುರಿತು

ಕ್ರ. ಸಂ.	ವರ್ಗಾವಣೆ ಮಾಡಲು ಇಚ್ಛಿಸಿರುವ ಸಂಸ್ಥೆಯ ಮತ್ತು ಮಾಲೀಕರ ಹೆಸರು	ನಿವೇಶನದ ಮಾದರಿ ಮತ್ತು ಸಂಖ್ಯೆ	ಸದರಿ ನಿವೇಶನವನ್ನು ವರ್ಗಾವಣೆ ಪಡೆಯುತ್ತಿರುವ ಸಂಸ್ಥೆಯ ಮತ್ತು ಮಾಲೀಕರ ಹೆಸರು
1	**ಲೈಫ್ ಅಸೋಸಿಯೇಟ್ಸ್ ಕಂಪನಿ** ಮಾ: ಶ್ರೀ ಜಿತ್ತೇಂದ್ರ ಮೋಹನಲಾಲ ಓಸ್ವಾಲ	ಕಾಳುಕಡಿ "ಪಿ" ಮಾದರಿಯ "168" ನೇ ಸಂಖ್ಯೆಯ ನಿವೇಶನ	**ಸಾವಿತ್ರಿ ಏಜೆನ್ಸೀಜ್** ಮಾ: ಶ್ರೀ ದೇವಕಿನಂದನ ರಾಮವತಾರ ಮಹಾಜನ
2	**ಜಮಶುದ್ದೀನ್ ಫಕ್ರುದ್ದೀನಸಾಬ ಕ್ವಾಡಲ್** ಮಾ: ಶ್ರೀ ಜಮಶುದ್ದೀನ್ ಫಕ್ರುದ್ದೀನಸಾಬ ಕ್ವಾಡಲ್	ಹಣ್ಣು "ಇ" ಮಾದರಿಯ "08" ನೇ ಸಂಖ್ಯೆಯ ನಿವೇಶನ	**ಬಿಸ್ತಿ ಟ್ರೇಡರ್ಸ್** ಮಾ: ಶ್ರೀ ಮಹಮ್ಮದಗೌಸ್ ಮುರ್ತುಜಾಸಾಬ ಬಿಸ್ತಿ

ಮುಂದುವರೆದು ಮೇಲ್ಕಂಡ ತಃಖ್ತೆಯ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಸಮಿತಿಯಿಂದ / ಇಲಾಖೆಯಿಂದ ಸನ್ನದು ಪಡೆದು ವ್ಯವಹರಿಸುತ್ತಿರುವ ಪೇಟೆಕಾರ್ಯಕರ್ತರ ಸಂಸ್ಥೆಗಳಿಗೆ ಹಂಚಿಕೆಯಾದ ನಿವೇಶನದಲ್ಲಿ ನಿರ್ಮಿಸಿದ ಕಟ್ಟಡ ಸಹಿತ ನಿವೇಶನವನ್ನು ಸನ್ನದು ಪಡೆದ ವ್ಯವಹರಿಸುತ್ತಿರುವ ಸಂಸ್ಥೆಗೆ ವರ್ಗಾವಣೆ ಕುರಿತು ಈ ಸಮಿತಿಯಿಂದ ಅನುಮತಿ ನೀಡಬೇಕಾಗಿರುತ್ತದೆ.

ಆದ್ದರಿಂದ **ವರ್ಗಾವಣೆ ಕೋರಿ ಬಂದಂತಹ ಅರ್ಜಿಗಳ ಕುರಿತು** ಏನಾದರೂ ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 15 ದಿನಗಳೊಳಗಾಗಿ ಈ ಸಮಿತಿಗೆ ಲಿಖಿತವಾಗಿ ತಿಳಿಸತಕ್ಕದ್ದು. ತಡವಾಗಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ನಿಗಧಿತ ಅವಧಿಯೊಳಗೆ ಆಕ್ಷೇಪಣೆಗಳು ಬಾರದೇ ಇದ್ದಲ್ಲಿ ಯಾರಿಂದಲೂ ಯಾವುದೇ ಆಕ್ಷೇಪಣೆ ಇಲ್ಲದಿರುವುದಾಗಿ ಪರಿಗಣಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ತಿಳಿಯಿರಿ. ಹೆಚ್ಚಿನ ವಿವರಗಳನ್ನು ಹುಬ್ಬಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಛೇರಿಯ ಸಮಯದಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಬ್ಬಳ್ಳಿ

ಸಹಿ/-ಆಡಳಿತಾಧಿಕಾರಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಬ್ಬಳ್ಳಿ

"ಯಥಾ ಪ್ರತಿ"
ಸಹಿ/- ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, .ಹುಬ್ಬಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020

ಸಂ.: ಬೆಂಅಪ್ರಾ/ನಯೋಸ/CLU-392/2503/2025-26 ದಿನಾಂಕ: 04.10.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಾಣಿಜ್ಯ ಮತ್ತು ವಸತಿ** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ.ಜಯರಾಮ್ ಬಿನ್ ಲೇ ನಾರಾಯಣ್ ಸಿಂಗ್ ನಂ.135, ನೇಸರ ನಿಲಯ, ವೆಂಕಟೇಶ್ವರ ಡೆಂಟಲ್ ಕಾಲೇಜ್ ಹತ್ತಿರ, ಆನೇಕಲ್ ಮುಖ್ಯರಸ್ತೆ, ಬನ್ನೇರುಘಟ್ಟ ಗ್ರಾಮ ಮತ್ತು ಪಂಚಾಯಿತಿ, ಬೆಂಗಳೂರು-560083	ಆನೇಕಲ್	ಜಿಗಣಿ	ಬನ್ನೇರುಘಟ್ಟ	67/3	0-25	ವ್ಯವಸಾಯ ವಲಯ	ವಾಣಿಜ್ಯ
					6/4ಎ	0-19		
					67/4ಬಿ	1-06		
					ಒಟ್ಟು	2-10		
					67/4ಎ	1-20	ವ್ಯವಸಾಯ ವಲಯ	ವಸತಿ
					68	1-19		
					ಒಟ್ಟು	2-39		
					ಒಟ್ಟು ಸೇರಿ	5-09 (0ಎ-02ಗುಂ ಖರಾಬು ಹೊರತುಪಡಿಸಿ)		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ ಅಭಿವೃದ್ಧಿ ಮತ್ತು ವಸತಿ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶವಿರುತ್ತದೆ ಹಾಗೂ ಯೋಗ್ಯ ಬೆಲೆಯಲ್ಲಿ ವಸತಿ ನಿವೇಶನ/ವಸತಿ ಘಟಕಗಳು/ಕಟ್ಟಡಗಳು ದೊರಕುತ್ತದೆ. ವಾಣಿಜ್ಯ / ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸದ ಕಾಮಗಾರಿಯು ಪೂರ್ಣಗೊಂಡ ನಂತರ ವಿವಿಧ ರೀತಿಯ ಉದ್ಯೋಗಗಳು ದೊರಕುತ್ತದೆ. ಈ ವಾಣಿಜ್ಯ/ವಸತಿ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಯೋಜನಾಬದ್ಧವಾದ ವಾಣಿಜ್ಯ/ವಸತಿ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ. ವಾಣಿಜ್ಯ/ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಮತ್ತು ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು